



**ಗುಂಡ:** ಸ್ನಾನದ ಸೋಪು ಎಷ್ಟು ಸರ್?
**ಅಂಗಡಿಯವ:** 30 ರೂಪಾಯಿ ಸರ್.
**ಗುಂಡ:** ಕಡಿಮೆ ಆಗೋಲ್ವಾ ಸರ್?
**ಅಂಗಡಿಯವ:** ಸ್ನಾನ ಮಾಡ್ತಾ ಇದ್ರೆ ಕಡಿಮೆ ಆಗುತ್ತೆ ಸರ್.

ಮಧ್ಯರಾತ್ರಿಯ ವೇಳೆ ಗದ್ದಲಕ್ಕೆ ಎಚ್ಚರವಾದ ಪತಿರಾಯ ಮನೆಯ ಹೊರಗೆ ಬಂದು ವಿಚಾರಿಸಿದ. ಆಗ ನೆರೆಮನೆಯಾತ ಯಾರೋ ಕಿಡಿಗೇಡಿಗಳು ಕಾಲೊನಿಯ ವಾಟರ್ ಟ್ಯಾಂಕ್ ನೀರಿಗೆ ವಿಷ ಬೆರೆಸಿದ್ದಾರೆ ಅಂದ. ಅದನ್ನು ಕೇಳಿ ಒಳಗೆ ಬಂದ.
**ಪತ್ನಿ:** ಏನಂತೆ ಗದ್ದಲ?
**ಪತಿ:** ಏನಿಲ್ಲ ಪುಂಡ ಪೋಕರಿಗಳ ಜಗಳ. ನೀನು ನೀರು ಕುಡಿದು ಮಲಗು.

**ಸುಮತಿ:** ರೀ... ಈಚೆಗೆ ನೀವು ತುಂಬ ಕ್ರೂರವಾಗಿ ವರ್ತಿಸುತ್ತಿದ್ದೀರಿ ಏಕೆ? ಮುಂಚೆ ಹೀಗಿರಲಿಲ್ಲ ನೀವು.
**ಸುರೇಶ:** ನನಗೆ ರಸ್ತೆ ಅಪಘಾತ ಆಗಿತ್ತಲ್ವಾ... ಆಗ ನನಗೆ ನಿನ್ನ ರಕ್ತ ಕೊಟ್ಟಿದ್ದೆ, ನೆನಪಿದ್ಯಾ? ಆವಾಗಿನಿಂದಲೂ ನನ್ನ ಗುಣದಲ್ಲಿ ಈ ಬದಲಾವಣೆ ಬಂದಿದೆ.

**ತಿಮ್ಮ:** ಮೊನ್ನೆ ನೂರು ರೂಪಾಯಿಗೆ ಒಂದು ಫೋನ್ ತಗೊಂಡೆ ಅಂದ್ಯಲ್ಲ ಯಾವ ಫೋನ್ ಅದು? ನನಗೂ ಕೊಡಿಸು.
**ಗುಂಡ:** ಓಹ್ ಅದಾ. ಅದು ಇಯರ್ ಫೋನ್.

**ಅಳಿಯ:** ಮಾವ ನೀವು ತುಂಬಾ ಗ್ರೇಟ್, ತುಂಬಾ ಕೂಲ್, ತುಂಬಾ ಕಾಮ್, ತುಂಬಾ ಸಾಫ್ಟ್. ನಿಮ್ಮಂತಹ ಸಹನಾಶೀಲರನ್ನು ನಾನು ಕಂಡೇ ಇಲ್ಲ.
**ಮಾವ:** ಇದೇನು ಅಳಿಯಂದ್ರೆ ನನ್ನನ್ನ ಇಷ್ಟೊಂದು ಹೊಗಳುತ್ತಿದ್ದೀರಿ, ಯಾಕೆ?
**ಅಳಿಯ:** ಹೌದು ಮತ್ತೆ, ನಿಮ್ಮ ಮಗಳನ್ನು ಮದುವೆಯಾಗಿ ವರ್ಷವಾಗಿಲ್ಲ, ಅಷ್ಟರಲ್ಲೇ ಅವಳ ಕಾಟ ತಡೆದುಕೊಳ್ಳಲು ಆಗುತ್ತಿಲ್ಲ. ಅಂಥದ್ರಲ್ಲಿ ಇಪ್ಪತ್ತೊಂದು ವರ್ಷ ತಡೆದುಕೊಂಡಿದ್ರಲ್ಲ ನೀವು ಗ್ರೇಟ್ ಅಲ್ಲದೆ ಮತ್ತೇನು?

**ತಿಮ್ಮ:** ಹೆಂಡತಿ ಅಂದರೆ ನಮ್ಮ ಒಂದು ಕಣ್ಣು ಇದ್ದಂತೆ.
**ಗುಂಡ:** ಗೊತ್ತು ಕಣೋ ಒಂದು ಕಣ್ಣು ಇದ್ರೆ ಸರಿಯಾಗಲ್ಲ ಅಂತ ತಾನೇ ನಾನು ಇನ್ನೊಬ್ಬಳನ್ನು ಮದುವೆಯಾಗಿದ್ದು.

**ಟೀಚರ್:** ಲೋ ಗುಂಡ ಹೋಂವರ್ಕ್ ಯಾಕೆ ಮಾಡಿಲ್ಲ?
**ಗುಂಡ:** ಟೀಚರ್ ನಾನಿರೋದು ಹಾಸ್ಟೆಲ್‌ನಲ್ಲಿ. ಅದಕ್ಕೆ ಹೋಂವರ್ಕ್ ಮಾಡಿಲ್ಲ. ಹಾಸ್ಟೆಲ್ ವರ್ಕ್ ಅಂತ ನೀವೂ ಕೊಟ್ಟಿಲ್ಲ.

***

**ಗುಂಡ:** ಅಪ್ಪಾ, ಗಂಡಸು ಅಂದ್ರೇನು?
**ಅಪ್ಪ:** ಮನೆಯಲ್ಲಿ ಹುಲಿ ಇದ್ದಂಗೆ ಇರೋರನ್ನು ಗಂಡಸು ಅಂತಾರೆ.
**ಗುಂಡ:** ನಾನೂ ದೊಡ್ಡವನಾಗಿ ಅಮ್ಮನ ಥರ ಗಂಡಸಾಗ್ತೀನಿ.

**ಕಂಡಕ್ಟರ್:** ನಿನ್ನೆ ನಾನು ಮೂರು ವಿಷಲ್ ಹಾಕಿದ್ರೂ ಬಸ್ಸನ್ನು ಯಾಕೆ ನಿಲ್ಲಿಸುತ್ತಿಲ್ಲ?
**ಡ್ರೈವರ್:** ಬ್ರೇಕ್ ಹಾಕಿದ್ರೂ ಬಸ್ ನಿಲ್ಲುತ್ತಿಲ್ಲ. ಇನ್ನು ನೀನು ವಿಷಲ್ ಹಾಕಿದ್ರೆ ನಿಲ್ಲುತ್ತಾ?

ಗುಂಡ ಅಮ್ಮನ ಕೈಲಿ ಪೆಟ್ಟು ತಿಂದು ಅಳುತ್ತ ಅಪ್ಪನ ಬಳಿಗೆ ಹೋಗಿ ಕೇಳಿದ.
**ಗುಂಡ:** ಅಪ್ಪ ನೀನು ಯಾವಾಗಲಾದರೂ ನರಕದ ಕಡೆಗೆ ಹೋಗಿದ್ಯಾ?
**ಅಪ್ಪ:** ಇಲ್ಲ ಕಣೋ.
**ಗುಂಡ:** ಮತ್ತೆ ಈ ಯಮರೂಪಿ ಅಮ್ಮ ಎಲ್ಲಿ ಸಿಕ್ಕಿದ್ಲು ನಿನಗೆ?

**ಗಂಡ:** ಇವತ್ತು ಪಾರ್ಟಿಯಲ್ಲಿ ಎಲ್ಲರೂ ನನ್ನನ್ನೇ ನೋಡಬೇಕು. ಅದಕ್ಕೆ ಯಾವ ಕೋಟು ಹಾಕಿಕೊಳ್ಳಲಿ?
**ಹೆಂಡತಿ:** ಆ ಪೆಟಿಕೋಟ್ ಹಾಕಿಕೊಂಡು ಹೋಗಿ ಖಂಡಿತ ಎಲ್ಲರೂ ನಿಮ್ಮನ್ನೇ ನೋಡ್ತಾರೆ.

**ಕಲ್ಲೇಶ:** ಅಣ್ಣಾ ಸಿಗರೇಟ್‌ನ ಆ ಕಡೆ ಸೇದು. ಇಲ್ಲಿ ಫ್ಯಾಮಿಲಿ ಇದೆ.
**ಮಲ್ಲೇಶ:** ಫ್ಯಾಮಿಲಿ ಇದ್ದರೆ ಏನಾಯ್ತು?
**ಕಲ್ಲೇಶ:** ನನ್ನ ಕಷ್ಟ ಅರ್ಥ ಮಾಡ್ಕೊ. ನನಗೂ ಸೇದಬೇಕು ಅನಿಸುತ್ತೆ, ಅದ್ಕೆ ಆ ಕಡೆ ಸೇದು.

**ಕಾನ್‌ಸ್ಟೆಬಲ್:** ಸರ್ ನಿನ್ನೆ ಜೈಲಿನಲ್ಲಿ ಕೈದಿಗಳು ರಾಮಾಯಣ ನಾಟಕ ಮಾಡಿದ್ರು.
**ಜೈಲರ್:** ಅದಕ್ಕೇನಿಗ?
**ಕಾನ್‌ಸ್ಟೆಬಲ್:** ಸೀತೆಯನ್ನು ಹುಡುಕುತ್ತೇವೆ ಅಂತ ಹೋದ ವಾನರ ಪಾತ್ರಧಾರಿಗಳು ವಾಪಸ್ ಬಂದಿಲ್ಲ ಸರ್. ಜೊತೆಗೆ ಸಂಜೀವಿನಿ ಪರ್ವತ ತರುತ್ತೇನೆ ಅಂತ ಕಾಂಪೌಂಡ್ ಹಾರಿದ ಹನುಮಂತ ಪಾತ್ರಧಾರಿಯೂ ಇದುವರೆಗೂ ಪತ್ತೆ ಇಲ್ಲ. ಅರ್ಧಕ್ಕರ್ಧ ಜೈಲೇ ಖಾಲಿ ಸರ್.

**ಗುಂಡ:** ಹೊಸ ವರ್ಷದ ಕ್ಯಾಲೆಂಡರ್ ಕೊಡಿ.
**ಅಂಗಡಿಯವನು:** ಯಾವುದು ಕೊಡ್ಲಿ?
**ಗುಂಡ:** ರಜಾ ಜಾಸ್ತಿ ಇರೋದು ಕೊಡಿ.




ಸಂಗ್ರಹ: ಶರದ ಕುಲಕರ್ಣಿ, ಬೀದರ್